ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಃ ಕೃವಾವಿ/ತಾಂ-2/45/ಕೃಪಂಪ್ರ/2013-14

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು -01
ದಿನಾಂಕಃ15-03-2014

**ಸುತ್ತೋಲೆ**

ವಿಷಯಃ 2013-14ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಆಹ್ವಾನಿಸುವ ಬಗ್ಗೆ-

ಉಲ್ಲೇಖಃ1. ಸರ್ಕಾರದ ಆದೇಶ ಸಂಃ ಕೃತೋಇ.323.ಕೃಯೋಕಾ.2000 ಬೆಂಗಳೂರು, ದಿನಾಂಕಃ 31-01-2002.

2. ಸರ್ಕಾರದ ಆದೇಶ ಸಂಃ ಕೃತೋಇ. 213. ಕೃಯೋಕಾ. 2002 ಬೆಂಗಳೂರು ದಿಃ 24-2-2003.
3. ಸರ್ಕಾರಿ ಪತ್ರ ಸಂ ಎಹೆಚ್ ಡಿ.267.ಎಎಂಎಲ್.2004 ಬೆಂಗಳೂರು ದಿ: 18-12-2004.
4. ಸರ್ಕಾರ ಆದೇಶ ಸಂ ಕೃತೋಇ. 85 ಕೃಯೋಕಾ.2005 ಬೆಂಗಳೂರು ದಿಃ 1-9-2005.
5. ಸರ್ಕಾರಿ ಆದೇಶ ಸಂ ಕೃತೋಇ. 72. ಕೃಯೋಕಾ.2007 ಬೆಂಗಳೂರು ದಿಃ 28-04-2007.

---

ಕೃಷಿ ವಲಯದ ನಾಲ್ಕು ಪ್ರಮುಖ ವಿಭಾಗಗಳಲ್ಲಿ ತಮ್ಮದೇ ಆದ ಅಮೂಲ್ಯ ಅನ್ವೇಷಣೆ/ವಿಶಿಷ್ಟ ಸಾಧನೆ ಮೂಲಕ ರೈತ ಸಮುದಾಯಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ರಾಜ್ಯದ ಪರಿಣಿತ ಕೃಷಿಕ ಮಹನೀಯರುಗಳನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಗೌರವಿಸುವ ಕುರಿತ ಕಾರ್ಯಕ್ರಮವನ್ನು ಉಲ್ಲೇಖಿತ ಸರ್ಕಾರಿ ಆದೇಶದ ಅನುಸಾರ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು ಈ ನಿಟ್ಟಿನಲ್ಲಿ 2013-14ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ರಾಜ್ಯದ ಆಸಕ್ತ ಮಹನೀಯರುಗಳಿಂದ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಸೂಚಿತ ನಾಲ್ಕು ವಿಭಾಗಗಳಡಿಯಲ್ಲಿ ಸದರಿ ಪ್ರಶಸ್ತಿಗೆ ನಾಮ ನಿರ್ದೇಶನ ಸಲ್ಲಿಸ ಬಯಸುವ ಮಹನೀಯರುಗಳು, ತಮ್ಮ ನಾಮ ನಿರ್ದೇಶನಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಸಾಧನೆಗಳ ಪೂರ್ಣ ವಿವರಗಳು ಹಾಗೂ ಸಂಬಂಧಿತ ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಕೃಷಿ ವಿಶ್ವವಿದ್ಯಾಲಯಗಳ ತಜ್ಞರ ಷರಾ/ಶಿಫಾರಸ್ಸಿನೊಂದಿಗೆ ಜಂಟಿ ಕೃಷಿ ನಿರ್ದೇಶಕರು(ವಿಸ್ತರಣೆ ಮತ್ತು ತರಬೇತಿ) ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 ಇವರಿಗೆ **ದಿನಾಂಕಃ 31-05-2014** ರೊಳಗಾಗಿ ಕಳುಹಿಸಬೇಕು. ಅವಧಿ ಮೀರಿ ಬರುವ ಪ್ರವೇಶ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಈ ಕಾರ್ಯಕ್ರಮದ ಬಗ್ಗೆ ಸ್ಥಳೀಯವಾಗಿ ವ್ಯಾಪಕ ಪ್ರಚಾರ ಕಾರ್ಯವನ್ನು ತಮ್ಮ ಹಂತದಲ್ಲಿ ಕೈಗೊಳ್ಳಲು ಸೂಚಿಸಿದೆ. ಈಗಾಗಲೇ ಈ ಪ್ರಶಸ್ತಿಯನ್ನು ಪಡೆಯದೇ ಇರುವಂತಹ ಅರ್ಹ ಮಹನೀಯರುಗಳು ನಿಮ್ಮ ವ್ಯಾಪ್ತಿಯಲ್ಲಿ ಇದ್ದಲ್ಲಿ ಅವರಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪಡೆದು ತಿಳಿಸಲಾಗಿರುವಂತೆ ಶಿಫಾರಸ್ಸಿನೊಂದಿಗೆ ಸಕಾಲದಲ್ಲಿ ಕಳುಹಿಸಿಕೊಡುವ ಬಗ್ಗೆ ಕ್ರಮ ವಹಿಸತಕ್ಕದ್ದು.

## ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ವಿವರ (ರೂ.ಗಳಲ್ಲಿ)

| ಕ್ರ.ಸಂ | ವಿಭಾಗ | ಪ್ರಥಮ ಸ್ಥಾನ | ದ್ವಿತೀಯ ಸ್ಥಾನ | ತೃತೀಯ ಸ್ಥಾನ |
|---|---|---|---|---|
| 1 | ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಧೀಕರಣ | 1,00,000 | 50,000 | 25,000 |
| 2 | ಸಾವಯವ ಕೃಷಿ | 1,00,000 | 50,000 | 25,000 |
| 3 | ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ | 1,00,000 | 50,000 | 25,000 |
| 4 | ನೀರಿನ ಸಮರ್ಥ ಬಳಕೆ | 1,00,000 | 50,000 | 25,000 |

**ಕೃಷಿ ಪಂಡಿತ ಪ್ರಶಸ್ತಿ ಪರಿಗಣನೆಗೆ ಪ್ರಮುಖ ಅಂಶಗಳು:**

1. ಉದ್ದೇಶಿತ ಕೃಷಿ ಪಂಡಿತ ಪ್ರಶಸ್ತಿಗಾಗಿ ಭಾಗವಹಿಸಲಿಚ್ಛಿಸುವವರು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ/ವಿಶಿಷ್ಟ ಸಾಧನೆಯನ್ನು ಮಾಡಿರಬೇಕು. ಅವರ ಸಂಶೋಧನೆಗಳು/ಸಾಧನೆಗಳು ವ್ಯಾಪಕವಾಗಿ ಅಳವಡಿಸಲ್ಪಟ್ಟು ಕೃಷಿ ಕ್ಷೇತ್ರದ ಏಳಿಗೆಗೆ ಪೂರಕವಾಗಿರಬೇಕು. ಅಭ್ಯರ್ಥಿಗಳು ಮಾಡಿರುವ ಸಾಧನೆಯು ಮೂಲ ಸ್ವರೂಪದಾಗಿದ್ದು ಬೇರೆಯವರು ಮಾಡಿರುವ ಸಾಧನೆಗಿಂತ ಭಿನ್ನವಾಗಿರಬೇಕು.

2. ಕೃಷಿ ಸಾಗುವಳಿಯಲ್ಲಿ ಅಮೋಘ ಬದಲಾವಣೆ ಮಾಡಿದಂತಹ ಸಾಧಕರು.

3. ಮುಖ್ಯವಾಗಿ ಇವರ ಸಂಶೋಧನೆಯಲ್ಲಿ
   - ಅ) ಕೃಷಿ ಸಾಗುವಳಿ ವೆಚ್ಚದಲ್ಲಿ ಮಿತವ್ಯಯ
   - ಆ) ಕೃಷಿ ಕಾರ್ಯಗಳ ಸಮರ್ಥ ಸಕಾಲಿಕ ಅನುಷ್ಠಾನ
   - ಇ) ಉತ್ಪಾದಕತೆಯಲ್ಲಿ ಹೆಚ್ಚಳ
   - ಈ) ಕೃಷಿ ಉತ್ಪನ್ನಗಳ ಗುಣಮಟ್ಟದಲ್ಲಿ ಸುಧಾರಣೆ
   - ಉ) ರೈತರ ಆರ್ಥಿಕ ಏಳಿಗೆಗ ಪೂರಕವಾದಂತಹ ಸಾಧನೆ ಇತ್ಯಾದಿಗಳಿರಬೇಕು.

**ಪ್ರಶಸ್ತಿಗೆ ನಾಮ ನಿರ್ದೇಶನ ಸಲ್ಲಿಸುವ ಮಹನೀಯರುಗಳಿಗೆ ಮುಖ್ಯ ಸೂಚನೆ**

1. ಈ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿದ್ದಲ್ಲಿ ಮಾತ್ರ ಪರಿಗಣಿಸಬಹುದಾಗಿದೆಯೇ ಹೊರತು ಪ್ರಶಸ್ತಿ ನೀಡಲೇಬೇಕೆಂಬ ನಿಯಮ ಕಡ್ಡಾಯವಿರುವುದಿಲ್ಲ.
2. ಕ್ಷೇತ್ರ ಭೇಟಿಗೆ ಆಯ್ಕೆ ಮಾಡುವಾಗ ಕೃಷಿ ವಿಶ್ವವಿದ್ಯಾನಿಲಯದ ತಜ್ಞರು/ಜಂಟಿ ಕೃಷಿ ನಿರ್ದೇಶಕರು ಶಿಫಾರಸ್ಸು ಮಾಡಿರುವ ಅರ್ಜಿಗಳಿಗೆ ಆಧ್ಯತೆ ನೀಡಲಾಗುವುದು.
3. ಈ ಪ್ರಶಸ್ತಿಯಲ್ಲಿ ಭಾಗವಹಿಸಲು ಕೃಷಿ ವಲಯದಲ್ಲಿ ಗಮನಾರ್ಹ ಸಾಧನೆಗೈದ ರಾಜ್ಯದ ಎಲ್ಲಾ ಕೃಷಿಕರಿಗೂ ಮುಕ್ತ ಅವಕಾಶವುಂಟು.
4. ಅರ್ಜಿದಾರರ ಹೆಸರಿನಲ್ಲಿ ಪಹಣಿ ಪತ್ರ (ಭೂ ದಾಖಲೆ/ಆರ್.ಟಿ.ಸಿ) ಕಡ್ಡಾಯವಾಗಿರಬೇಕು.
5. ಅಭ್ಯರ್ಥಿಗಳ ಒಂದೇ ಸಾಧನೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಅಂಗ ಸಂಸ್ಥೆಗಳಿಂದ ಪ್ರಶಸ್ತಿ ನಗದು ಬಹುಮಾನ ಪಡೆದಂತಹ ಪ್ರಕರಣಗಳನ್ನು ಪ್ರಶಸ್ತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

**ಉದಾ:** ಕೇಂದ್ರ ಸರ್ಕಾರದ ಭಾರತೀಯ ಕೃಷಿ ಅನುಸಂಧಾನ ಪರಿಷತ್(ICAR),ನ್ಯಾಷನಲ್ ಇನ್ನೋವೇಷನ್ ಫೌಂಡೇಷನ್, ರಾಜ್ಯ ಸರ್ಕಾರದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿ, ನಗದು ಬಹುಮಾನ ಸಹಿತ ಪ್ರಶಸ್ತಿ ಪಡೆದವರು ಈ ಪ್ರಶಸ್ತಿಗೆ ಅರ್ಹರಲ್ಲ.

6. **ಕೃಷಿ ಪಂಡಿತ ಪ್ರಶಸ್ತಿಯನ್ನು ಒಮ್ಮೆ ಪ್ರಶಸ್ತಿ ಪಡೆದವರಿಗೆ ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.** ರಾಜ್ಯ/ಕೇಂದ್ರ ಸರ್ಕಾರಗಳ ವಿವಿಧ ಇಲಾಖೆ ಮತ್ತು ಅಂಗ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ/ನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.

7. ಪ್ರಶಸ್ತಿಗೆ ಆಯ್ಕೆ ಮಾಡುವಲ್ಲಿ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮ

ರೈತ ಸಂಪರ್ಕ ಕೇಂದ್ರಗಳ ವತಿಯಿಂದಲೂ ಸಹ ಈ ಕಾರ್ಯಕ್ರಮದ ಬಗ್ಗೆ ಹೆಚ್ಚು ಪ್ರಚಾರ ಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಕ್ತ ಆದೇಶಗಳನ್ನು ನೀಡಲು ಸೂಚಿಸಲಾಗಿದೆ.

ಕೃಷಿ ನಿರ್ದೇಶಕರು

ಪ್ರತಿಯನ್ನು :

1. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ನಾಮ ನಿರ್ದೇಶನದ ಅರ್ಜಿಯಲ್ಲಿ ಕಡ್ಡಾಯವಾಗಿ ಸಾಧನೆ ಕುರಿತಂತೆ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ನಿಗಧಿತ ದಿನಾಂಕದೊಳಗಾಗಿ ಸಲ್ಲಿಸುವುದು.
2. ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು/ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಿಗೆ (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳ ಮೂಲಕ) ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.